ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ಇವರು ನಿಯಮ 72 ರ ಅಡಿಯಲ್ಲಿ ಗಮನ ಸೆಳೆಯುವ ಸೂಚನೆ ಸಂಖ್ಯೆ:14ಕ್ಕೆ ಮಾನ್ಯ ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖಾ ಸಚಿವರ ಉತ್ತರ.

*****

ಸೂಚನೆ:

ಗ್ರಾಹಕರ ಹಿತರಕ್ಷಣೆ ಕಾಪಾಡುವ ಮಹತ್ತರವಾದ ಜವಾಬ್ದಾರಿ ಹೊಂದಿರುವ ಕಾನೂನು ಮಾಪನಶಾಸ್ತ್ರ ಇಲಾಖೆಗಳು ಗ್ರಾಹಕರಿಗೆ ಆಗುತ್ತಿರುವ ಮೋಸ ತಡೆಗೆ ಮುಂದಾಗದಿರುವುದು ಟೀಕೆಗೆ ಗುರಿಯಾಗಿರುತ್ತದೆ. ವ್ಯಾಪಾರ, ವ್ಯವಹಾರ ಮತ್ತು ಕೈಗಾರಿಕಾ ಉತ್ಪನ್ನ ಹಾಗೂ ಸಂರಕ್ಷಣೆಗಳಲ್ಲಿ ಉಪಯೋಗಿಸುವ ಎಲ್ಲಾ ಎಲ್ಲಾ ತೂಕ ಮತ್ತು ಅಳತೆಗಳಲ್ಲಿ ನಿಖರತೆ ಕಾಪಾಡುವಂತಹ ಜವಾಬ್ದಾರಿಯನ್ನು ಕಾನೂನು ಮಾಪನ ಇಲಾಖೆ ಹೊಂದಿದೆ. ಆದರೆ, ಕೋಲಾರ ಜಿಲ್ಲೆಯನ್ನು ಒಳಗೊಂಡಂತೆ ಎಲ್ಲಾ ಜಿಲ್ಲೆಯ ಅಧಿಕಾರಿಗಳು ಮಾತ್ರ ಗ್ರಾಹಕರ ಹಿತ ಕಾಯಲು ಮುಂದಾಗುತ್ತಿಲ್ಲ, ಕಾನೂನು ಮಾಪನಶಾಸ್ತ್ರ ಕಾಯಿದೆ ಕುರಿತಂತೆ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಹಕರಿಗೆ ಮಾಹಿತಿಯೇ ಇಲ್ಲ. ಇದರೊಂದಿಗೆ ಕಾನೂನು ಮಾಪನ ಇಲಾಖೆ ಎಂಬುದಿದೆ ಎಂತಲೂ ಹಲವರಿಗೆ ಗೊತ್ತಿಲ್ಲ. ಅದಕ್ಕೆ ತಕ್ಕಂತೆ ಇಲಾಖೆ ಅಧಿಕಾರಿಗಳು ಇದ್ದು ಇಲ್ಲದಂತೆ ಇರುತ್ತಾರೆ. ಜತೆಗೆ ಕಾನೂನು ಮಾಪನಶಾಸ್ತ್ರ ಕಾಯಿದೆ ಕುರಿತ ಜನಜಾಗೃತಿ ಮೂಡಿಸುವ ಕಾರ್ಯವನ್ನೂ ವಸ್ತುನಿಷ್ಠವಾಗಿ ನಡೆಸುತ್ತಿಲ್ಲದಿರುವುದರಿಂದ ಈ ವಿಷಯವನ್ನು ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

ಉತ್ತರ:

- ಕಾನೂನು ಮಾಪನಶಾಸ್ತ್ರ ಇಲಾಖೆಯು ದೈನಂದಿನ ವ್ಯವಹಾರದಲ್ಲಿ ತೂಕ ಮತ್ತು ಅಳತೆಗಳಲ್ಲಿ ನಿಖರತೆಯನ್ನು ಕಾಪಾಡುವ ಮೂಲಕ ಗ್ರಾಹಕರಿಗೆ ಮೋಸವಾಗುವುದನ್ನು ತಡೆಗಟ್ಟಿ ಗ್ರಾಹಕರ ಹಿತರಕ್ಷಣೆಯನ್ನು ಕಾಪಾಡುವ ಧ್ಯೇಯೋದ್ದೇಶವನ್ನು ಹೊಂದಿದ್ದು, ವ್ಯಾಪಾರ, ವಾಣಿಜ್ಯೋದ್ಯಮ ಮತ್ತು ಕೈಗಾರಿಕಾ ಸಂಸ್ಥೆಗಳಲ್ಲಿ ಉಪಯೋಗಿಸುವ ತೂಕ, ಅಳತೆ, ತೂಕದ ಸಾಧನ ಹಾಗೂ ಅಳತೆ ಸಾಧನಗಳ ನಿಖರತೆ ಪರಿಶೀಲಿಸಿ ನಿಯಮಾನುಸಾರ ಸತ್ಯಾಪನೆ ಮತ್ತು ಮುದ್ರೆ ಕಾರ್ಯ ಕೈಗೊಳ್ಳಲಾಗುತ್ತಿದೆ ಹಾಗೂ ಗ್ರಾಹಕರು ಖರೀದಿಸುವ ವಸ್ತುಗಳಿಗೆ ಎಂ.ಆರ್.ಪಿ ದರಕ್ಕಿಂತ ಹೆಚ್ಚಿನ ದರವನ್ನು ಪಡೆಯದಂತೆ ಆಗಿಂದಾಗ್ಗೆ ತಪಾಸಣೆಗಳನ್ನು ನಡೆಸುತ್ತಾ, ಲೀಗಲ್ ಮೆಟ್ರಾಲಜಿ ನಿಯಮಗಳ ಉಲ್ಲಂಘನೆ ಪತ್ತೆ ಹಚ್ಚಿ ಮೊಕದ್ದಮೆಗಳನ್ನು ಹೂಡುವುದು, ಹೂಡಿದ ಮೊಕದ್ದಮೆಗಳಿಗೆ ನಿಯಮಾನುಸಾರ ಅಭಿಸಂಧಾನ ಮಾಡಿ ಶುಲ್ಕ ಸಂಗ್ರಹಣೆ ಮಾಡುವುದು, ಅಭಿಸಂಧಾನವಾಗದಿದ್ದ ಪಕ್ಷದಲ್ಲಿ ನ್ಯಾಯಾಂಗ ಪ್ರಕ್ರಿಯೆ ನಡೆಸುವುದು ಹಾಗೂ ಗ್ರಾಹಕ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುವುದು ಇಲಾಖೆಯ ಪ್ರಮುಖ ಕಾರ್ಯಚಟುವಟಿಕೆಗಳಾಗಿವೆ.

- ಇಲಾಖೆಯು ಮೇಲಿನ ಅಂಶಗಳ ಕುರಿತಂತೆ ಕೋಲಾರ ಜಿಲ್ಲೆಯನ್ನು ಒಳಗೊಂಡಂತೆ ರಾಜ್ಯದಲ್ಲಿ ರಾಜಸ್ವ ಸಂಗ್ರಹಿಸಿರುವ ಬಗ್ಗೆ ಕಳೆದ 3 ವರ್ಷಗಳಲ್ಲಿ ಸಾಧಿಸಿರುವ ಪ್ರಗತಿಯ ವಿವರಗಳು ಈ ಕೆಳಗಿನಂತಿವೆ.

| ವರ್ಷ | ಸತ್ಯಾಪನಾ ಶುಲ್ಕ | ಅಭಿಸಂಧಾನ ಶುಲ್ಕ | ಪರವಾನಗಿ ಶುಲ್ಕ (ಲೈಸನ್ಸ್/ ನೋಂದಣಿ ಪ್ರಮಾಣ ಪತ್ರಗಳ ನ್ನೊಳಗೊಂಡಂತೆ) | ಸಂಗ್ರಹಿಸಲಾದ ಒಟ್ಟು ಶುಲ್ಕ (ರೂ.ಕೋಟಿಗಳಲ್ಲಿ) |
|---|---|---|---|---|
| 2021-22 | 51.31 | 6.28 | 0.27 | 57.86 |
| 2022-23 | 56.36 | 6.85 | 0.34 | 63.55 |
| 2023-24 (ಏಪ್ರಿಲ್-2023 ರಿಂದ ಅಕ್ಟೋಬರ್-2023ರ ಮಾಹೆಯವರೆಗೆ) | 39.18 | 3.68 | 0.04 | 42.90 |

- ಈಗಾಗಲೇ ಈ ಕಛೇರಿಯ ಅಧಿಕೃತ ಜ್ಞಾಪನ ಸಂಖ್ಯೆ:ಕಾಮಾಇ/ಆ.ಸು.ಆ.ವ/ಸಿಆರ್-18/2022-23,ದಿನಾಂಕ: 19-08-2022ರಲ್ಲಿ ರಾಜ್ಯದ ಎಲ್ಲಾ ಕ್ಷೇತ್ರಾಧಿಕಾರಿಗಳು ಸಂಬಂಧಪಟ್ಟ ಜಿಲ್ಲೆಯಲ್ಲಿ ಸಹಯೋಗದೊಂದಿಗೆ ಪ್ರತೀ ಶುಕ್ರವಾರದ ಮಧ್ಯಾಹ್ನದಂದು ಅವರವರ ಕ್ಷೇತ್ರವ್ಯಾಪ್ತಿಯಲ್ಲಿ ಗ್ರಾಹಕರ ಜಾಗೃತಿ ಕಾರ್ಯಕ್ರಮ/ವಸ್ತು ಪ್ರದರ್ಶನ ನಡೆಸುವುದರ ಮೂಲಕ ಗ್ರಾಹಕರಿಗೆ ತೂಕ ಮತ್ತು ಅಳತೆಗಳ ಬಗ್ಗೆ ಜಾಗೃತಿ/ಅರಿವು ಮೂಡಿಸುವಂತೆ ಹಾಗೂ ಗ್ರಾಹಕರ ಜಾಗೃತಿಗಾಗಿ ಪೋಸ್ಟರ್‌ಗಳನ್ನು ಸರಳ ಭಾಷೆ ಮತ್ತು ಚಿತ್ರಾತ್ಮಕ ಮಾಹಿತಿಯೊಂದಿಗೆ ಪ್ರಿಂಟ್ ಮಾಡಿಸಿ, ಕೆಳಕಂಡ ಸ್ಥಳಗಳಲ್ಲಿ ಅಳವಡಿಸುವಂತೆ ತಿಳಿಸಲಾಗಿರುತ್ತದೆ.(ಅನುಬಂಧದಲ್ಲಿ ಒದಗಿಸಿದೆ).
- ಹೆಚ್ಚಿನ ಮೌಲ್ಯದ ವಹಿವಾಟು ಸಂಸ್ಥೆಗಳಾದ ಪೆಟ್ರೋಲ್/ಡಿಸೇಲ್ ಬಂಕ್, ಆಭರಣ ಅಂಗಡಿಗಳು, ಮಲ್ಟಿಪ್ಲೆಕ್ಸ್-ಮಾಲ್, ರೈತರ ಸಂತೆ, ಅಕ್ಕಿ ಉತ್ಪಾದಕರು, ಕೆಎಫ್‌ಸಿಎಸ್‌ಸಿ ಗೋಡೌನ್, ಎಲ್‌ಪಿಜಿ ಅನಿಲ ವಿತರಕರು, ನ್ಯಾಯಬೆಲೆ ಅಂಗಡಿ, ಎ.ಪಿ.ಎಂ.ಸಿ ಯಾರ್ಡ್, ಎಫ್‌ಸಿಎಸ್ ವೇರ್‌ಹೌಸ್, ಸಕ್ಕರೆ ಕಾರ್ಖಾನೆ, ಹಾಲಿನ ಬೂತ್‌ಗಳು, ಹಾಲು ಉತ್ಪಾದಕರ ಸಂಘ, ಕೋ-ಆಪರೇಟೀವ್ ಸೊಸೈಟಿ, ಕೃಷಿ ಪತ್ತಿನ ಸಹಕಾರ ಸಂಘಗಳು, ಚಿಲ್ಲರೆ ಮಾರಾಟ ಮಳಿಗೆಗಳು, ಸಹಕಾರ ಸಂಘಗಳ ಮಾರಾಟ ಮಳಿಗೆಗಳು, ಎಫ್‌ಕೆಸಿಸಿಐ, ತಾಲ್ಲೂಕು/ಜಿಲ್ಲಾ ಮಟ್ಟದಲ್ಲಿರುವ Chamber of Commerce ಗಳಲ್ಲಿ ಹಾಗೂ ಇನ್ನಿತರ ಹೆಚ್ಚಿನ ಜನನಿಬಿಡ ಸ್ಥಳಗಳಲ್ಲಿ ಮತ್ತು ಬಸ್ ಸ್ಟ್ಯಾಂಡ್, ರೈಲ್ವೇ ಸ್ಟೇಷನ್, ವಿಮಾನ ನಿಲ್ದಾಣ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ, ಜಾತ್ರಾ ಮಹೋತ್ಸವ, ಸರ್ಕಾರಿ ಕಾರ್ಯಕ್ರಮ, ಸರ್ಕಾರಿ ಹಬ್ಬಗಳಾದ ಗಣರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆ, ಗಾಂಧಿಜಯಂತಿ ಇನ್ನಿತರ ಹಬ್ಬಗಳಲ್ಲಿ,

ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಯ ಕಛೇರಿಯ ಸ್ಥಳಗಳಲ್ಲಿ ತಾಲ್ಲೂಕು/ಜಿಲ್ಲಾಡಳಿತದ ಸಹಯೋಗದೊಂದಿಗೆ ಗ್ರಾಹಕರಿಗೆ ತೂಕ ಮತ್ತು ಅಳತೆಗಳ ಬಗ್ಗೆ ಅರಿವು ಮೂಡಿಸಲು ಆಟೋ ಟ್ಯಾಕ್ಸಿ ಘಟಕ ಹಾಗೂ ಇ-ಕಾಮರ್ಸ್‌ಗಳಿಗೆ ಸಂಬಂಧಿಂದಂತೆ ವಸ್ತು ಪ್ರದರ್ಶನ ಕಾರ್ಯಕ್ರಮಗಳನ್ನು/ಗ್ರಾಹಕರ ಹಿತರಕ್ಷಣಾ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಇಲಾಖೆಯ ಎಲ್ಲಾ ಕ್ಷೇತ್ರಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

- ಅಲ್ಲದೇ ವಿಶ್ವವಿಖ್ಯಾತ ಮೈಸೂರು ದಸರಾ, ಸುತ್ತೂರು ಜಾತ್ರಾ ಮಹೋತ್ಸವ ಹಾಗೂ ಮೇಲೆ ತಿಳಿಸಲಾಗಿರುವ ಸ್ಥಳಗಳಲ್ಲಿ/ಇನ್ನಿತರ ಹೆಚ್ಚಿನ ಸಾರ್ವಜನಿಕ/ಜನನಿಬಿಡ ಸ್ಥಳಗಳಲ್ಲಿ ಗ್ರಾಹಕರ ಜಾಗೃತಿ ಕಾರ್ಯಕ್ರಮ/ವಸ್ತು ಪ್ರದರ್ಶನ ನಡೆಸುವುದರ ಮೂಲಕ ಗ್ರಾಹಕರಿಗೆ ತೂಕ ಮತ್ತು ಅಳತೆಗಳ ಬಗ್ಗೆ ಜಾಗೃತಿ/ಅರಿವು ಮೂಡಿಸಲು ಕ್ರಮವಹಿಸಲಾಗಿದೆ.
- ಅದರಂತೆ ಮೇಲೆ ತಿಳಿಸಲಾಗಿರುವ ಸಾರ್ವಜನಿಕ ಸ್ಥಳಗಳಲ್ಲಿ, ತೂಕ ಮತ್ತು ಅಳತೆ, ಪೊಟ್ಟಣ ಸಾಮಗ್ರಿ, ಆಟೋ ಮತ್ತು ಟ್ಯಾಕ್ಸಿ ಘಟಕ ಹಾಗೂ ಇ-ಕಾಮರ್ಸ್‌ಗೆ ಸಂಬಂಧಿಸಿದಂತೆ ಗ್ರಾಹಕರಿಗೆ ಮೋಸವಾಗುವುದನ್ನು ಹಾಗೂ ಸಕ್ಕರೆ ಕಾರ್ಖಾನೆಗಳಲ್ಲಿ ಉಪಯೋಗಿಸುವ ವೇಬ್ರಿಡ್ಜ್ ತೂಕದ ಸಾಧನಗಳಲ್ಲಿ ರೈತರಿಗೆ ತೂಕದಲ್ಲಿ ಆಗುವ ಮೋಸವನ್ನು ತಡೆಗಟ್ಟುವ ನಿಟ್ಟಿನಲ್ಲಿ ಇಲಾಖೆಯ ಟೋಲ್-ಫ್ರೀ ಸಂಖ್ಯೆ: 1800 599 1100 ನ್ನು ಸಂಪರ್ಕಿಸುವಂತೆ ಹಾಗೂ ಇ-ಮೇಲ್ ವಿಳಾಸ: clm-lm-ka@nic.in ಗೆ ದೂರು ಸಲ್ಲಿಸುವಂತೆ – ಸೂಚನಾ ಫಲಕವನ್ನು ಅಳವಡಿಸಲು ವ್ಯಾಪಾರ/ವಹಿವಾಟು ಸಂಸ್ಥೆಗಳಿಗೆ, ಸಕ್ಕರೆ ಕಾರ್ಖಾನೆಗಳಿಗೆ ಸೂಚನೆ ನೀಡಲಾಗಿದೆ.
- ಇಲಾಖೆಗೆ ಸಂಬಂಧಿಸಿದ ಕಾಯ್ದೆ/ನಿಯಮಗಳ ಬಗ್ಗೆ ಜನ ಸಾಮಾನ್ಯರಿಗೆ ತಿಳಿಸುವ ಬಗ್ಗೆ ಕೈಪಿಡಿಯನ್ನು ಸಿದ್ಧಪಡಿಸಲಾಗುತ್ತಿದೆ. ಜನ ಭಾಷೆಯಲ್ಲಿ ಕಾನೂನು ಮಾಪನಶಾಸ್ತ್ರ ಇಲಾಖೆಯ ಕಾಯ್ದೆ/ನಿಯಮಗಳನ್ನು ಮುದ್ರಿಸುವ ಬಗ್ಗೆ ನಿರ್ದೇಶಕರು, ಭಾಷಾಂತರ ನಿರ್ದೇಶನಾಲಯ, ಕರ್ನಾಟಕ ಸರ್ಕಾರ ಇವರಿಗೆ ಇಲಾಖೆಯಿಂದ ಮಾಹಿತಿ ಒದಗಿಸಲಾಗಿರುತ್ತದೆ.
- ಇಲಾಖೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಕ್ಷೇತ್ರಾಧಿಕಾರಿಗಳು ಅವರವರ ತಾಲ್ಲೂಕು/ಜಿಲ್ಲಾ ವ್ಯಾಪ್ತಿಯಲ್ಲಿ ಗ್ರಾಹಕರ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಗ್ರಾಹಕರಲ್ಲಿ ಅರಿವು ಮೂಡಿಸುತ್ತಿದ್ದು, ಇನ್ನು ಮುಂದೆ ಇನ್ನು ಹೆಚ್ಚಿನ ಮಟ್ಟದಲ್ಲಿ ಗ್ರಾಹಕರಲ್ಲಿ ಅರಿವು ಮೂಡಿಸಲು ಹೆಚ್ಚಿನ ಗ್ರಾಹಕರ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಕ್ರಮವಹಿಸಲಾಗುತ್ತಿದೆ.

ಆನಾಸ 142 ಕಾಮಾಸೇ 2023 (ಇ-ಆಫೀಸ್)

(ಕೆ.ಹೆಚ್ ಮುನಿಯಪ್ಪ)

ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು
ಮಾಪನಶಾಸ್ತ್ರ ಇಲಾಖಾ ಸಚಿವರು

ಕರ್ನಾಟಕ ಸರ್ಕಾರ

ಕಾನೂನು ಮಾಪನಶಾಸ್ತ್ರ ಇಲಾಖೆ

ಸಂಖ್ಯೆ:ಕಾಮಾಇ/ಆ.ಸು.ಆ.ವ/ಸಿಆರ್-18/2022-23

ಕಾನೂನು ಮಾಪನಶಾಸ್ತ್ರ ನಿಯಂತ್ರಕರ ಕಛೇರಿ
"ಮಾಪನಸೌಧ", 4ನೇ ಮಹಡಿ,
ನಂ.1, ಆಲಿ ಅಸ್ಕರ್ ರಸ್ತೆ, ಪಿ.ಬಿ.ನಂ.175,
ಬೆಂಗಳೂರು-52. ದಿನಾಂಕ: 19-08-2022.

# ಅಧಿಕೃತ ಜ್ಞಾಪನ

**ವಿಷಯ:** ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2ರ ಮೊದಲ ವರದಿಯ ಶಿಫಾರಸ್ಸಿನ ಅನುಷ್ಠಾನದ ಸಂಬಂಧ ಗ್ರಾಹಕರ ಜಾಗೃತಿಗಾಗಿ ಪೋಸ್ಟರ್‌ಗಳಲ್ಲಿ ಸರಳ ಭಾಷೆ ಮತ್ತು ಚಿತ್ರಾತ್ಮಕ ಮಾಹಿತಿಯನ್ನು ಮತ್ತು ಆಭರಣ ಅಂಗಡಿಗಳು ಮತ್ತು ಇತರ ಹೆಚ್ಚಿನ ಮೌಲ್ಯದ ವಹಿವಾಟು ಸಂಸ್ಥೆಗಳಲ್ಲಿ ಪೋಸ್ಟರ್‌ಗಳನ್ನು ಕಡ್ಡಾಯವಾಗಿ ಪ್ರದರ್ಶಿಸಲು ಕ್ರಮ ಕೈಗೊಳ್ಳುವ ಬಗ್ಗೆ.

**ಉಲ್ಲೇಖ:** ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2ರ ಮೊದಲ ವರದಿಯ ಶಿಫಾರಸ್ಸಿನ ಕ್ರಮ ಸಂಖ್ಯೆ:27.

*******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2ರ ಮೊದಲ ವರದಿಯಲ್ಲಿ ಕಾನೂನು ಮಾಪನಶಾಸ್ತ್ರ ಇಲಾಖೆಗೆ ಸಂಬಂಧಿಸಿದಂತೆ ಸಾಮಾನ್ಯ ಮತ್ತು ಸೇವಾವಾರು ಶಿಫಾರಸ್ಸುಗಳನ್ನು ನೀಡಲಾಗಿದ್ದು ಅವುಗಳನ್ನು ಅನುಷ್ಠಾನಗೊಳಿಸುವಂತೆ ತಿಳಿಸಲಾಗಿರುತ್ತದೆ. ಸದರಿ ಸಾಮಾನ್ಯ ಶಿಫಾರಸ್ಸಿನ ಕ್ರಮ ಸಂಖ್ಯೆ: 27 ರಲ್ಲಿ ಕಾನೂನು ಮಾಪನಶಾಸ್ತ್ರ ಇಲಾಖೆಯು ಗ್ರಾಹಕರ ಜಾಗೃತಿಗಾಗಿ ಪೋಸ್ಟರ್‌ಗಳಲ್ಲಿ ಸರಳ ಭಾಷೆ ಮತ್ತು ಚಿತ್ರಾತ್ಮಕ ಮಾಹಿತಿಯನ್ನು ಮತ್ತು ಆಭರಣ ಅಂಗಡಿಗಳು ಮತ್ತು ಇತರ ಹೆಚ್ಚಿನ ಮೌಲ್ಯದ ವಹಿವಾಟು ಸಂಸ್ಥೆಗಳಲ್ಲಿ ಪೋಸ್ಟರ್‌ಗಳನ್ನು ಕಡ್ಡಾಯವಾಗಿ ಪ್ರದರ್ಶಿಸಲು ತಿಳಿಸಲಾಗಿರುತ್ತದೆ.

ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2ರ ಮೊದಲ ವರದಿಯ ಶಿಫಾರಸ್ಸಿನ ಕ್ರಮ ಸಂಖ್ಯೆ: 27 ರ ಅನುಷ್ಠಾನದ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಕ್ಷೇತ್ರಾಧಿಕಾರಿಗಳು ಈ ಕೆಳಕಂಡ ಅಂಶಗಳನ್ನು ತತ್ ಕ್ಷಣದಿಂದ ತಪ್ಪದೇ ಕಟ್ಟುನಿಟ್ಟಾಗಿ ಪಾಲಿಸಲು ಈ ಮೂಲಕ ಆದೇಶಿಸಿದೆ.

1. ರಾಜ್ಯದ ಎಲ್ಲಾ ಕ್ಷೇತ್ರಾಧಿಕಾರಿಗಳು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿ/ಅಪರ ಮುಖ್ಯ ಜಿಲ್ಲಾಧಿಕಾರಿಗಳಿಗೆ ವರದಿ ಮಾಡಿಕೊಂಡು, ಜಿಲ್ಲಾಡಳಿತದ ಸಹಯೋಗದೊಂದಿಗೆ ಗ್ರಾಹಕ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
2. ರಾಜ್ಯದ ಎಲ್ಲಾ ಕ್ಷೇತ್ರಾಧಿಕಾರಿಗಳು ಪ್ರತೀ ಶುಕ್ರವಾರದ ಮಧ್ಯಾಹ್ನದಂದು ಅವರವರ ಕ್ಷೇತ್ರವ್ಯಾಪ್ತಿಯಲ್ಲಿ ಗ್ರಾಹಕರ ಜಾಗೃತಿ ಕಾರ್ಯಕ್ರಮ/ವಸ್ತು ಪ್ರದರ್ಶನ ನಡೆಸುವುದರ ಮೂಲಕ ಗ್ರಾಹಕರಿಗೆ ತೂಕ ಮತ್ತು ಅಳತೆಗಳ ಬಗ್ಗೆ ಜಾಗೃತಿ/ಅರಿವು ಮೂಡಿಸುವಲ್ಲಿ ಆದ್ಯ ಗಮನ ಹರಿಸಿ, ಸೂಕ್ತ ಕ್ರಮವಹಿಸಲು ಆದೇಶಿಸಿದೆ.
3. ಗ್ರಾಹಕರ ಜಾಗೃತಿಗಾಗಿ ಪೋಸ್ಟರ್‌ಗಳನ್ನು ಸರಳ ಭಾಷೆ ಮತ್ತು ಚಿತ್ರಾತ್ಮಕ ಮಾಹಿತಿಯೊಂದಿಗೆ ಪ್ರಿಂಟ್ ಮಾಡಿಸಿ, ಕೆಳಕಂಡ ಸ್ಥಳಗಳಲ್ಲಿ ಅಳವಡಿಸುವುದು. - ಮಾದರಿ ನಕಲು ಪ್ರತಿಗಳನ್ನು ಕೇಂದ್ರ ಕಛೇರಿಯಿಂದ ಪಡೆದುಕೊಳ್ಳಲು ಸೂಚಿಸಿದೆ.

4. ಹೆಚ್ಚಿನ ಮೌಲ್ಯದ ವಹಿವಾಟು ಸಂಸ್ಥೆಗಳಾದ ಪೆಟ್ರೋಲ್ ಬಂಕ್, ಆಭರಣ ಅಂಗಡಿಗಳು/ ಮಲ್ಟಿಪ್ಲೆಕ್ಸ್-ಮಾಲ್, ರೈತರ ಸಂತೆ, ಅಕ್ಕಿ ಉತ್ಪಾದಕರು,, ಕೆಎಫ್‌ಸಿಎಸ್‌ಸಿ ಗೋಡೌನ್, ಎಲ್‌ಪಿಜಿ ಅನಿಲ ವಿತರಕರು, ಹಾಲಿನ ಬೂತ್‌ಗಳು, ಇನ್ನಿತರ ಹೆಚ್ಚಿನ ಜನನಿಬಿಡ ಸ್ಥಳಗಳಲ್ಲಿ ಹಾಗೂ ಬಸ್ ಸ್ಟ್ಯಾಂಡ್, ರೈಲ್ವೇ ಸ್ಟೇಷನ್, ವಿಮಾನ ನಿಲ್ದಾಣ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ತೂಕ ಮತ್ತು ಅಳತೆ, ಪೊಟ್ಟಣ ಸಾಮಗ್ರಿ, ಆಟೋ ಟ್ಯಾಕ್ಸಿ ಘಟಕ ಹಾಗೂ ಇ-ಕಾಮರ್ಸ್‌ಗಳಿಗೆ ಸಂಬಂಧಿಸಿದಂತೆ ತಪ್ಪದೇ ಬ್ಯಾನರ್, ಪೋಸ್ಟರ್, ಪಾಂಪ್ಲೇಟ್‌ಗಳನ್ನು ಅಳವಡಿಸುವುದರ ಮೂಲಕ ಗ್ರಾಹಕರಿಗೆ ಅರಿವು ಮೂಡಿಸುವುದು

5. ಬಸ್ ಸ್ಟ್ಯಾಂಡ್, ರೈಲ್ವೇ ಸ್ಟೇಷನ್, ವಿಮಾನ ನಿಲ್ದಾಣ ಇನ್ನಿತರ ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ನ್ಯಾಯಬೆಲೆ ಅಂಗಡಿ, ಎಪಿಎಂಸಿ ಯಾರ್ಡ್, ಎಫ್‌ಸಿಎಸ್ ವೇರ್‌ಹೌಸ್, , ಸಕ್ಕರೆ ಕಾರ್ಖಾನೆ, ಹಾಲು ಉತ್ಪಾದಕರ ಸಂಘ, ಕೋ-ಆಪರೇಟೀವ್ ಸೊಸೈಟಿ, ಕೃಷಿ ಪತ್ತಿನ ಸಹಕಾರ ಸಂಘಗಳು, ಚಿಲ್ಲರೆ ಮಾರಾಟ ಮಳಿಗೆಗಳು, ಸಹಕಾರ ಸಂಘಗಳ ಮಾರಾಟ ಮಳಿಗೆಗಳು, ಮುಂತಾದ ಸರ್ಕಾರಿ ಸಂಸ್ಥೆಗಳ ಸ್ಥಳಗಳಲ್ಲಿ ಸ್ಟಾಲ್‌ಗಳನ್ನು ಅಳವಡಿಸಿ ಗ್ರಾಹಕರಿಗೆ ಇಲಾಖೆಯ ಕಾರ್ಯಚಟುವಟಿಕೆಗಳಾದ ತೂಕ ಮತ್ತು ಅಳತೆ, ಪೊಟ್ಟಣ ಸಾಮಗ್ರಿ, ಆಟೋ ಟ್ಯಾಕ್ಸಿ ಘಟಕ ಹಾಗೂ ಇ-ಕಾಮರ್ಸ್‌ಗಳಿಗೆ ಸಂಬಂಧಿಂದಂತೆ ಗ್ರಾಹಕರ ಹಿತರಕ್ಷಣಾ/ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

6. ಜಾತ್ರಾ ಮಹೋತ್ಸವ, ಸರ್ಕಾರಿ ಕಾರ್ಯಕ್ರಮ, ಸರ್ಕಾರಿ ಹಬ್ಬಗಳಾದ ಗಣರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆ, ಗಾಂಧಿಜಯಂತಿ ಇನ್ನಿತರ ಹಬ್ಬಗಳಲ್ಲಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಯ ಕಛೇರಿಯ ಸ್ಥಳಗಳಲ್ಲಿ ತಾಲ್ಲೂಕು/ಜಿಲ್ಲಾಡಳಿತದ ಸಹಯೋಗದೊಂದಿಗೆ ಗ್ರಾಹಕರಿಗೆ ತೂಕ ಮತ್ತು ಅಳತೆಗಳ ಬಗ್ಗೆ ಅರಿವು ಮೂಡಿಸಲು ಆಟೋ ಟ್ಯಾಕ್ಸಿ ಘಟಕ ಹಾಗೂ ಇ-ಕಾಮರ್ಸ್‌ಗಳಿಗೆ ಸಂಬಂಧಿಂದಂತೆ ವಸ್ತು ಪ್ರದರ್ಶನ ಕಾರ್ಯಕ್ರಮಗಳನ್ನು/ಗ್ರಾಹಕರ ಹಿತರಕ್ಷಣಾ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

7. FKCCI, ತಾಲ್ಲೂಕು/ಜಿಲ್ಲಾ ಮಟ್ಟದಲ್ಲಿರುವ Chamber of Commerce ಗಳಲ್ಲಿ ಇಲಾಖೆಯ ಕಾರ್ಯಚಟುವಟಿಕೆಗಳ ಬಗ್ಗೆ ಅರಿವು ಮೂಡಿಸುವುದು ಹಾಗೂ ಕಾಲಕಾಲಕ್ಕೆ ಇಲಾಖೆಯಲ್ಲಿ ಆಗುವ ನಿಯಮ/ಕಾಯಿದೆಗಳ ತಿದ್ದುಪಡಿ ಬಗ್ಗೆ ಮಾಹಿತಿ ನೀಡುವುದು. ವ್ಯಾಪಾರ ವಾಣಿಜ್ಯ ಸಂಘ-ಸಂಸ್ಥೆಗಳಿಗೆ ಸಂಬಂಧಿಸಿದಂತೆ ಅಸೋಸಿಯೇಷನ್‌ಗಳೊಡನೆ ಸಂಪರ್ಕ ಸಾಧಿಸಿ, ಗ್ರಾಹಕರಿಗೆ ಇಲಾಖೆಯ ಕಾರ್ಯಚಟುವಟಿಕೆಗಳ ಬಗ್ಗೆ ಅರಿವು ಮೂಡಿಸುವುದು.

ಮೇಲೆ ತಿಳಿಸಿರುವಂತೆ, ಪ್ರತೀ ವಾರ ಕೈಗೊಂಡ ಕ್ರಮದ ಬಗ್ಗೆ ಛಾಯಾಚಿತ್ರ ಪ್ರತಿಯೊಂದಿಗೆ ಇ-ಮೇಲ್ ಮೂಲಕ ಕೇಂದ್ರ ಕಛೇರಿಗೆ ನೇರವಾಗಿ ವರದಿಯನ್ನು ಸಲ್ಲಿಸಲು ಸೂಚಿಸಿದೆ.

25.08.22

ನಿಯಂತ್ರಕರು,

ಕಾನೂನು ಮಾಪನಶಾಸ್ತ್ರ ಇಲಾಖೆ.

ಗೆ,

ರಾಜ್ಯದ ಎಲ್ಲಾ ಸಹಾಯಕ ನಿಯಂತ್ರಕರು ಹಾಗೂ ನಿರೀಕ್ಷಕರುಗಳಿಗೆ.

ಪ್ರತಿಯನ್ನು: ರಾಜ್ಯದ ಎಲ್ಲಾ ಜಂಟಿ ನಿಯಂತ್ರಕರು ಹಾಗೂ ಉಪನಿಯಂತ್ರಕರುಗಳಿಗೆ ಸೂಕ್ತ ಕ್ರಮಕ್ಕಾಗಿ.